ಸಾಲು ಸಾಲಾಗಿ ಅರ್ಜಿ ಹಿಡಿದು ಹೋಗುವ ದಲಿತರನ್ನು ಕಾಣುವಾಗ ಶಿಕ್ಷಕನಾಗಿ ನನಗೆ ದುಃಖವಾಗುತ್ತದೆ. ಈ ಸೋಲಿನಲ್ಲಿ ನನ್ನ ಪಾಲೂ ಇಲ್ಲವೇ? ಅದೇ ವೇಳೆ, ಐಎಎಸ್, ಐಪಿಎಸ್ ಅಧಿಕಾರಿಗಳು, ಇನ್ನಿತರ ಉನ್ನತ ಅಧಿಕಾರಿಗಳು, ಪ್ರೊಫೆಸರುಗಳು, ರಾಜಕಾರಣಿಗಳು, ತಮ್ಮ ಮಕ್ಕಳಿಗೆ ಇನ್ನೂ ಮೀಸಲಾತಿಯಲ್ಲಿ ಪಾಲು ಕೇಳುವುದನ್ನು ನೋಡಿದಾಗ ಸರ್ಕಾರದಿಂದ ಸಾಧ್ಯವಿರುವುದನ್ನೆಲ್ಲ ದಕ್ಕಿಸಿಕೊಳ್ಳುವ ಅವರ ಧಾವಂತವನ್ನು ಕಂಡಾಗ ಅಸಹ್ಯವಾಗುತ್ತದೆ. ಅನ್ನ ಸಾಲಲ್ಲ, ಚಿತ್ರಾನ್ನ ಕೊಡಿ ಅನ್ನುವ ಮಂದಿ ಕಾದು ಕುಳಿತಿದ್ದಾರೆ. ಸವಲತ್ತುಗಳು, ಪ್ರಶಸ್ತಿಗಳು, ಏನಿದ್ದರೂ ನಮಗೇ ಬರಲಿ ಅನ್ನುವವರು... ಅವರನ್ನು ಕರೆದು ಕೊಡಿ' ನಕ್ಕು ನುಡಿದರು ರಂಗನಾಥ್.

ತಾನು ಮಹತ್ತರವಾದ ಪ್ರಶಸ್ತಿ ಕೊಡಿಸುವ ಸ್ಥಾನದಲ್ಲಿದ್ದೇನೆ ಎಂದಾಗಲೂ ಇಬ್ಬರು ಶಿಕ್ಷಕರೂ ನಿರುತ್ಸಾಹ ತೋರಿಸಿದ್ದು ದಾಮೋದರರ ಅಹಮ್ಮನ್ನು ಧರೆಗಿಳಿಸಿತ್ತು. ಆಯ್ಕೆ ಸಮಿತಿ ಯಾರಿಗಾದರೂ ಕೊಟ್ಟುಕೊಳ್ಳಲಿ ಎಂದು ಸುಮ್ಮನಾದರು ದಾಮೋದರ್.

★★★

ಮರುದಿನ ಬೆಳಗ್ಗೆ 'ಉತ್ತಮ ಶಿಕ್ಷಕರ ಪ್ರಶಸ್ತಿಯ ಬಗೆಗೆ ನನ್ನದೊಂದು ವಿನಂತಿ ಇದೆ ಸರ್... ಎನ್ನುತ್ತ ಒಬ್ಬರು ಬಂದರು. 'ಸರ್, ನಾನು ಹೆಡ್ ಮಾಸ್ತರ್ ರಂಗನಾಥರ ಮಗ. ನೀವು ಅವರ ಶಾಲೆಯಲ್ಲೇ ಕಲಿತವರು ಎಂಬ ಮಾಹಿತಿ ಸಿಕ್ಕಿತು. ನನ್ನ ಕೆಲಸ ಸುಲಭವಾಯಿತು' ಎಂದು ನಕ್ಕರಾತ.

ಅಪ್ಪನಿಗೆ ಬೇಡದ ಪ್ರಶಸ್ತಿ ಕೇಳಿಕೊಂಡು ಮಗ ಬಂದನೇ!... ಎಂದು ಆಶ್ಚರ್ಯಗೊಂಡರೂ ತೋರಿಸದೆ ಕುಳಿತುಕೊಳ್ಳುವಂತೆ ಹೇಳಿದರು ದಾಮೋದರ್.

ಎದುರಿಗಿದ್ದ ಕುರ್ಚಿಯಲ್ಲಿ ಕುಳಿತ ಆತ ಫೈಲೊಂದನ್ನು ಎದುರಿಗಿಟ್ಟು, 'ನನ್ನ ಹೆಂಡತಿಯ ತಾಯಿಯ ಅಕ್ಕ, ಅಂದ್ರೆ ನನ್ನ ದೊಡ್ಡತ್ತೆ ಸಾರ್ ಇವರು. ಶಿಕ್ಷಕಿಯಾಗಿ ಒಳ್ಳೇ ಹೆಸರು ಮಾಡಿದ್ದಾರೆ. ಮೊದಲು ಇಲ್ಲಿ ಬೆಂಗಳೂರಲ್ಲೇ ಇದ್ದರು. ಹತ್ತು ವರ್ಷಗಳ ಹಿಂದೆ ಮಲೆನಾಡಿಗೆ ವರ್ಗವಾಯಿತು. ಅವರ ಗಂಡ ಅಲ್ಲಿ ಕಾಫಿತೋಟ, ರಾಜಕೀಯ ಮಾಡಿಕೊಂಡಿದ್ದಾರೆ. ನೀವು ಮನಸ್ಸು ಮಾಡಿ ದೊಡ್ಡತ್ತೆಗೆ ಈ ಬಾರಿ ಪ್ರಶಸ್ತಿ ಕೊಡಿಸಬೇಕು ಸಾರ್. ಬರುವ ಬಾರಿ ಟೀಚರ್ಸ್ ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲಲು ಇದೊಂದು ಚಿಮ್ಮುಹಲಗೆ ಸರ್... ಪ್ರಶಸ್ತಿ ವಿಜೇತ ಶಿಕ್ಷಕಿ ಎನ್ನುವಾಗ ಅಭ್ಯರ್ಥಿತನಕ್ಕೂ ಒಂದು ತೂಕ ಬರುತ್ತೆ. ಮಂತ್ರಿಗಳದ್ದು ಮೊದಲಿನಿಂದಲೂ ಪರಿಚಯ. ಲೇಡಿ ಅನ್ನುವದನ್ನೂ, ದಲಿತರು ಅನ್ನುವದನ್ನೂ ಹೈಲೈಟ್ ಮಾಡಿ ಪ್ರಯತ್ನಿಸುತ್ತೇನೆ ಎಂದು ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ' ಎಂದರಾತ.

ದಾಮೋದರ್ ಕಣ್ಣೆತ್ತಿ ಅವರನ್ನೊಮ್ಮೆ ನೋಡಿದರು. ರಂಗನಾಥರು ನಕ್ಕು ಹೇಳಿದ ಚಿತ್ರಾನ್ನ ನೆನಪಾಯಿತು. 'ಅರ್ಜಿ ಕೊಡಿ. ಮಂತ್ರಿಗಳೇ ಹೇಳಿದ್ದಾರಲ್ಲ, ಎಲ್ಲಾ ವಿಧದಲ್ಲೂ ಅರ್ಹರಿದ್ದಾರೆ, ಆಯ್ಕೆ ಸಮಿತಿಯವರು ಪರಿಗಣಿಸುತ್ತಾರೆ' ಅಂದರು ದಾಮೋದರ್.

## ಗೋಪೀನಾಥ್ ರಾವ್

ಊರು ದಕ್ಷಿಣ ಕನ್ನಡ ಜಿಲ್ಲೆಯ ಕಟಪಾಡಿ. ತಂದೆ ಹೆಸರಾಂತ ಯಕ್ಷಗಾನ ಅರ್ಥಧಾರಿ ಹಾಗೂ ಕನ್ನಡ ಅಧ್ಯಾಪಕ, ದಿವಂಗತ ಮಟ್ಟಿ ಸುಬ್ಬರಾಯರು. ಅಮ್ಮ ಮುತ್ತಮ್ಮ. ವೃತ್ತಿಯಲ್ಲಿ ಲೆಕ್ಕಪರಿಶೋಧಕ. ಪ್ರಸ್ತುತ ದುಬೈಯಲ್ಲಿ ಉದ್ಯೋಗ. ಅವರ ಕಥಾಸಂಕಲನಗಳು: 'ಸಾರ್ವಭೌಮ', 'ಪಾಂ ಪಾಂ ರೈಲು', 'ರಂಗವಲ್ಲಿ ಮನೆ ಎಲ್ಲಿ?'